Date :08-02-2016

# ಬೇಡಿಕೆ ಇಳಿಕೆಯಿಂದ ಏಲಕ್ಕಿ ದರ ಇಳಿಕೆ

* ಬೇಡಿಕೆಗಿಂತ ಪೂರೈಕೆ ಹೆಚ್ಚಳವಿದ್ದುದರಿಂದ ಸಣ್ಣ ಏಲಕ್ಕಿ ದರ ಹಿಂದಿನ ವಾರ ಇಳಿಕೆಯಾಗಿದೆ. ಹಿಂದಿನ ಖರೀದಿಗಳಿಂದ ದೇಶೀ ಮಾರುಕಟ್ಟೆಗಳಲ್ಲಿ ಸಾಕಷ್ಟು ದಾಸ್ತಾನಿದ್ದುದರಿಂದ ಉತ್ತರಭಾರತದ ಖರೀದಿದಾರರು ಖರೀದಿ ಚಟುವಟಿಕೆಯಲ್ಲಿ ಗೊಡಗಿಲ್ಲವೆನ್ನಲಾಗಿದೆ.
* ರಫ್ತುದಾರರು ರಫ್ತು ಬೇಡಿಕೆಹೊಂದಿರುವುದರಿಂದ ಆಸಕ್ತಿಯಿಂದ ಖರೀದಿ ನಡೆಸಿದ್ದರೆನ್ನಲಾಗಿದೆ. ರಫ್ತು ಗುಣಮಟ್ಟದ ಏಲಕ್ಕಿ ಲಭ್ಯತೆ ಸಾಕಷ್ಟು ಪ್ರಮಾಣದಲ್ಲಿರಲಿಲ್ಲವೆನ್ನಲಾಗಿದ್ದು ರಫ್ತುದಾರರು 120 ಟನ್‌ಗಳಷ್ಟು ಖರೀದಿ ಮಾಡಿದ್ದಾರೆನ್ನಲಾಗಿವೆ.
* ಗುಣಮಟ್ಟದ ಇಳಿಕೆಯಿಂದ ದರ ಇಳಿಕೆಯಾಗಿದೆಯೆನ್ನಲಾಗಿದ್ದು, ಉತ್ತಮ ಗುಣಮಟ್ಟದ ಏಲಕ್ಕಿ ಈಗಲೂ ಹೆಚ್ಚಿನ ದರಕ್ಕೆ ಮಾರಾಟವಾಗುತ್ತಿದ್ದು ಉತ್ತಮ ಗುಣಮಟ್ಟದ ಹಸಿರು ಏಲಕ್ಕಿ ಲಭ್ಯತೆ ಕಡಿಮೆಯೆನ್ನಲಾಗಿದೆ.
* ಒಟ್ಟು ಆವಕ 532 ಟನ್‌ಗಳಿಂದ 768 ಟನ್‌ಗಳಿಗೆ ಹೆಚ್ಚಳವಾಗಿದ್ದು ವೈಯಕ್ತಿಕ ಸರಾಸರಿ ದರ ಕಿಲೊಗ್ರಾಂಗೆ ರೂ.515–585 ಇತ್ತೆನ್ನಲಾಗಿದೆ.
* ಏಲಕ್ಕಿ ಪ್ಲಾಂಟರ್‌ಗಳ ಸಂಘದ ಏಲಂ ಬೊಡಿನ ಕಣ್ಣೂರ್ ಏಲಂಗೆ ಆವಕ 42 ಟನ್‌ಗಳಿಗೆ ಇಳಿಕೆಯಾಗಿದ್ದು 40.8 ಟನ್ ಮಾರಾಟವಾಗಿದೆ. ಸರಾಸರಿ ದರ ಕೆ.ಜಿ. ಗೆ ರೂ.529.14 ರಿಂದ ರೂ. 542.95 ಇತ್ತು.
* ಫೆಬ್ರವರಿ 6ರ ತನಕದ ಸೀಸನ್‌ನ ಕೊನೆಯ ತನಕದ ಒಟ್ಟು ಆವಕ 19932 ಟನ್‌ಗಳಾಗಿದ್ದು 19231 ಟನ್ ಮಾರಾಟವಾಗಿದೆ. ವೈಯಕ್ತಿಕ ಸರಾಸರಿ ದರ ಫೆಬ್ರವರಿ 6ರಂದು ಕೆ.ಜಿ.ಗೆ ರೂ.613.82 ಇತ್ತು.
* 8ಎಂಎಂ ಉತ್ತಮ ಹಸಿರು ಮತ್ತು ದೊಡ್ಡದು ಕೆ.ಜಿ.ಗೆ ರೂ.900–930 7–8 ಎಂಎಂ ರೂ.700–720, 6–7 ಎಂ.ಎಂ ರೂ.580–600 6 ಎಂಎಂ ಗಿಂತ ಸಣ್ಣದು ರೂ.500 ಸಾಮಾನ್ಯ ಬಲ್ಕ್ ರೂ.500–520 ರಂತೆ (ಪ್ರತಿ ಕೆ.ಜಿ.ಗೆ) ಮಾರಾಟವಾಗಿದೆಯೆನ್ನಲಾಗಿದೆ.